ಕರ್ನಾಟಕ ಸರ್ಕಾರ

# ಉಪತಹಶೀಲ್ದಾರರವರ ನ್ಯಾಯಾಲಯ, ನಾಡ ಕಾರ್ಯಾಲಯ

## ಹಂಪಸಾಗರ,

**ಸಂ.ಕಂ.ಪಹಣಿ/ವಿವಾದ/10/2016-17** ದಿ.19.5.2018

**ಉಪಸ್ಥಿತರು : ಶ್ರೀ ಎ.ಚಂದ್ರಾನಾಯ್ಕ ಉಪತಹಶೀಲ್ದಾರರು, ನಾಡ ಕಛೇರಿ, ಹಂಪಸಾಗರ**

| ವಾದಿಗಳು | ಪ್ರತಿವಾದಿಗಳು |
| --- | --- |
| 1) ಶ್ರೀಮತಿ ಇಟ್ಟಿಗಿ ಉಮವ್ವ<br>ಗಂಡ ಉಮಾಪತಿ<br>ಗ್ರಾಮ : ಸಕ್ರಿಹಳ್ಳಿ | 1) ಶ್ರೀಮತಿ ಎಸ್.ಪಾರ್ವತಿ<br>ಗಂಡ ಚಂದ್ರಪ್ಪ<br>ಗ್ರಾಮ: ಸೋನಿಯಾನಗರ<br>ಹಗರಿಬೊಮ್ಮನಹಳ್ಳಿ. |

ವಿಷಯ : – **ಹಗರಿಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಹೋಬಳಿ, ಅಡವಿಕ್ಯಾದಿಗಿಹಳ್ಳಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 188/ಬಿ/2 ವಿಸ್ತೀರ್ಣ 2-29 ಎಕರೆ ಜಮೀನು ಕ್ರಯ ನೊಂದಣಿ ಪತ್ರ ಸಂಖ್ಯೆ ಹೆಚ್.ಬಿ.ಹೆಚ್-1-04385/ 2015-16/ದಿನಾಂಕ: 10-03-2016 ರಂತೆ ಕ್ರಯ ವಹಿವಾಟು ಪ್ರಕಾರ ಹಕ್ಕು ಬದಲಾವಣೆ ವಿಷಯದಲ್ಲಿ ತಕರಾರು–ವಿಚಾರಣೆ.**

**ಪೀಠಿಕೆ :–**

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಅಡವಿಕ್ಯಾದಿಗಿಹಳ್ಳಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 188/ಬಿ/2 ವಿಸ್ತೀರ್ಣ 2-29 ಎಕರೆ ಜಮೀನು ಕ್ರಯ ನೊಂದಣಿ ಪತ್ರಸಂಖ್ಯೆ ಹೆಚ್.ಬಿ.ಹೆಚ್-1-04385/2015-16/ದಿನಾಂಕ: 10-03-2016 ರಂದು ವಾಧಿಯ ಹೆಸರಿನಲ್ಲಿ ನೊಂದಣಿಯಾಗಿರುತ್ತದೆ. ನೊಂದಣಿಯ ಪ್ರಕಾರ ತಾಲೂಕಾ ಭೂಮಿ ಕೇಂದ್ರದಲ್ಲಿ ದಾಖಲಾಗಿ ವಹಿವಾಟು ಸಂಖ್ಯೆ 80, M.R. ಸಂಖ್ಯೆ 33/ 2015-16 ರಂತೆ ಹಕ್ಕು ಬದಲಾವಣೆಗೆ ಸಂಬಂಧಿಸಿದ ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಹಕ್ಕು ಬದಲಾವಣೆ ಕ್ರಮಕ್ಕಾಗಿ ಕಂದಾಯ ನಿರೀಕ್ಷಕರು, ಹಂಪಸಾಗರ ಇವರಿಗೆ ರವಾನಿಸಲಾಗಿ ಸದರಿ ನೋಟೀಸುಗಳು ಗ್ರಾಮ ಲೆಕ್ಕಾಧಿಕಾರಿ ಅಡವಿಕ್ಯಾದಿಗಿಹಳ್ಳಿ ಇವರ ದ್ವಾರ ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಜಾರಿ ಮಾಡಿರುತ್ತಾರೆ. ಜಾರಿ ಮಾಡಲಾಗಿ ಸದರಿ ಪ್ರಕರಣಕ್ಕೆ ಪ್ರತಿವಾದಿಗಳು ತಮ್ಮ ತಕರಾರನ್ನು ಭೂಮಿಕೇಂದ್ರದಲ್ಲಿನ ಸ್ವೀಕೃತಿಸಂಖ್ಯೆ7159/2015-16 ದಿನಾಂಕ: 18-03-2016 ದಾಖಲಿಸಿರುತ್ತಾರೆ. ತಕರಾರು ದಾಖಲಾದ ಹಿನ್ನೆಲೆಯಲ್ಲಿ ಕಂದಾಯ ನಿರೀಕ್ಷಕರು ಹಂಪಸಾಗರ ಇವರು ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸುತ್ತಾ ಮುಂದಿನ ವಿಚಾರಣೆಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಪ್ರಕರಣವನ್ನು ಈ

ನ್ಯಾಯಾಲಯದಲ್ಲಿ ಮೇಲಿನ ಸಂಖ್ಯೆಯಂತೆ ದಾಖಲಿಸಿಕೊಂಡು ದಿನಾಂಕ: 19-05-2016 ರಂದು ವಿಚಾರಣೆ ಪ್ರಾರಂಭಿಸಲಾಯಿತು. ಇದೇ ದಿವಸವೇ ವಾದಿ ಮತ್ತು ಪ್ರತಿವಾದಿಗಳು ಹಾಜರಾಗಿ ಪ್ರತಿವಾದಿಗಳು ತಾವು ಮಾಡಿರುವ ತಕರಾರನ್ನು ಇ-ಸ್ಟಾಂಪ್ ಮೂಲಕ ಒಪ್ಪಿಗೆ ಪತ್ರ ಸಲ್ಲಿಸಿರುತ್ತಾರೆ. ಒಪ್ಪಿಗೆ ಪತ್ರದ ಪ್ರಕಾರ ಪ್ರತಿವಾದಿಗಳು ತಾವು ಮಾಡಿರುವ ತಕರಾರನ್ನು ರಾಜಿ ಮಾಡಿಕೊಂಡು ಕ್ರಯಪತ್ರದ ಪ್ರಕಾರ ಹಕ್ಕು ಬದಲಾವಣೆ ಮಾಡಬಹುದೆಂದು ಹಕ್ಕು ಬದಲಾವಣೆ ಮಾಡಲು ಯಾವ ತಂಟೆ-ತಕರಾರುಗಳು ಇಲ್ಲವೆಂದು ಒಪ್ಪಿಗೆ ಪತ್ರದಲ್ಲಿ ಸಹಿ ಮಾಡಿ ಸಲ್ಲಿಸಿರುತ್ತಾರೆ.

ದಾಖಲೆಗಳನ್ನು ಪರಿಶೀಲಿಸಲಾಗಿ ಪಹಣಿ ಪ್ರಕಾರ ಶ್ರೀಮತಿ ಪಾರ್ವತಮ್ಮ ಗಂಡ ದಿ॥ ಗುರುಸಿದ್ದಪ್ಪ ಅಂತ ಇದ್ದು ಸದರಿಯವರಿಗೆ ಹ.ಬ.ಸಂಖ್ಯೆ 24/2001-02/ದಿನಾಂಕ: 03-05-2002 ರಂತೆ ಹಕ್ಕು ಪ್ರಾಪ್ತವಾಗಿರುವುದು ಕಂಡು ಬಂದಿದ್ದು, ಸದರಿ ಹಕ್ಕುದಾರರು ಕ್ರಯಪತ್ರ ಸಂಖ್ಯೆ ಹೆಚ್.ಬಿ.ಹೆಚ್-1-04385/2015-16/ದಿನಾಂಕ: 10-03-2016ರ ಪ್ರಕಾರ ವಾದಿಗಳಿಗೆ ಕ್ರಯಕ್ಕೆ ಮಾರಾಟ ಮಾಡಿರುತ್ತಾರೆ. ಕ್ರಯಪತ್ರವು ನೈಜತೆಯಿಂದ ಕೂಡಿರುತ್ತದೆ ಹಾಗೂ ಪ್ರತಿವಾದಿಗಳು ತಮ್ಮ ತಕರಾರನ್ನು ಲಿಖಿತ ಹೇಳಿಕೆ ಸಲ್ಲಿಸುವುದರ ಮೂಲಕ ಪ್ರಕರಣವನ್ನು ಹಿಂಪಡೆದಿರುವುದರಿಂದ ಈ ಕೆಳಕಂಡ

## ಆದೇಶ

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಅಡವಿಕ್ಯಾದಿಗಿಹಳ್ಳಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 188/ಬಿ/2 ವಿಸ್ತೀರ್ಣ 2-29 ಎಕರೆ ಜಮೀನು ಕ್ರಯದಾರರೂ ಆದ ವಾದಿ ಶ್ರೀಮತಿ ಇಟ್ಟಿಗಿ ಉಮ್ಮವ್ವ ಗಂಡ ಉಮಾಪತಿ ಸಾಕಿನ್ ಸಕ್ರಿಹಳ್ಳಿ ಇವರ ಹೆಸರಿನಲ್ಲಿ ಕ॥ಭೂ॥ಕ॥ 1964ರ ಕಲಂ 128 ಹಾಗೂ 129 ರನ್ವಯ ನೊಂದಣಿ ಪತ್ರ ಸಂಖ್ಯೆ ಹೆಚ್.ಬಿ.ಹೆಚ್-1-014385/2015-16 ರಂತೆ ಹಕ್ಕು ಬದಲಾವಣೆ ಮಂಜೂರು ಮಾಡಿ ಆದೇಶಿಸಿದೆ. ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕ: 19-05-2016 ರಂದು ಘೋಷಿಸಲಾಗಿದೆ.

ಉಪತಹಶೀಲ್ದಾರರು,
ನಾಡಕಛೇರಿ, ಹಂಪಸಾಗರ

ಉಪ ತಹಶೀಲ್ದಾರರು
ನಾಡ ಕಾರ್ಯಾಲಯ
ಹಂಪಸಾಗರ

ಪ್ರತಿಯನ್ನು :-
1) ವಾದಿ + ಪ್ರತಿವಾದಿಗಳಿಗೆ
2) ಪ್ರತಿಯನ್ನು ತಾಲೂಕು ಭೂಮಿ ಕೇಂದ್ರಕ್ಕೆ
3) ಹೆಚ್ಚುವರಿ ಪ್ರತಿ ಕಡತಕ್ಕೆ